# ಸಮಕಾಲೀನ ಜಗತ್ತಿಗೆ ಶ್ರೀರಾಮಕೃಷ್ಣರ ಸಂದೇಶ

ಸ್ವಾಮಿ ಅನನ್ಯಾನಂದ

ಅನುವಾದ: ಸ್ವಾಮಿ ಆತ್ಮಜ್ಞಾನಂದ

## ಅಮೋಘವಾದ ಶೋಧನಾದೀಪ

ಶ್ರೀರಾಮಕೃಷ್ಣರ ಜೀವನ ಹಾಗೂ ಸಂದೇಶದ ಮಹತ್ವವನ್ನು ಕುರಿತು ಅವರ ಪ್ರಮುಖ ಶಿಷ್ಯರಾದ ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ:

"ಶ್ರೀರಾಮಕೃಷ್ಣರ ಜೀವನ ಒಂದು ಅಮೋಘವಾದ ಶೋಧನಾ ದೀಪವಂತೆ. ಅದರ ಪ್ರಭೆಯಲ್ಲಿ ಹಿಂದೂಧರ್ಮದ ಸಂಪೂರ್ಣ ವ್ಯಾಪ್ತಿಯನ್ನು ನಿಸ್ಸಂದೇಹವಾಗಿ ತಿಳಿಯಬಹುದು... ಶ್ರೀರಾಮಕೃಷ್ಣರು ತಮ್ಮ ಜೀವನದ ಮೂಲಕ ಋಷಿಗಳು, ಅವತಾರಪುರುಷರು ತಿಳಿಸಬಯಸಿದ್ದನ್ನು ತೋರಿಸಿದ್ದಾರೆ. ಗ್ರಂಥಗಳು ವಿಚಾರಸರಣಿಗಳಷ್ಟೇ, ಅವರೆ ಇವರಾದರೋ ಅನುಭವದ ಪ್ರತಿಮೂರ್ತಿ. ಭಾರತ ದೇಶದ ಐದು ಸಾವಿರ ವರುಷಗಳ ಸಮಸ್ತ ಆಧ್ಯಾತ್ಮಿಕ ಪರಂಪರೆಯನ್ನು ತಮ್ಮ ಐವತ್ತೊಂದು ವರ್ಷಗಳ ಜೀವನದಲ್ಲಿ ಇವರು ಪ್ರದರ್ಶಿಸಿದರಷ್ಟೇ ಅಲ್ಲ, ಮುಂದಿನ ಪೀಳಿಗೆಗಳಿಗೆ ಆದರ್ಶವಾಗಿ ರೂಪುಗೊಂಡರು."[1]


ಇಂಗ್ಲೀಷಿನಲ್ಲಿರುವ 'ಶ್ರೀರಾಮಕೃಷ್ಣರ ಜೀವನ' ಎಂಬ ಪುಸ್ತಕಕ್ಕೆ ತಾವು ಬರೆದ ಮುನ್ನುಡಿಯಲ್ಲಿ ಮಹಾತ್ಮ ಗಾಂಧಿಯವರು ಹೀಗೆ ಬರೆಯುತ್ತಾರೆ:

"ಶ್ರೀರಾಮಕೃಷ್ಣರ ಜೀವನಕಥೆಯೆಂದರೆ, ಧರ್ಮಾನುಷ್ಠಾನದ ವೃತ್ತಾಂತ. ಅವರ ಜೀವನ ನಮ್ಮನ್ನು ಭಗವಂತನ ಸಮ್ಮುಖದಲ್ಲಿರಿಸುತ್ತದೆ. ಅವರ ಜೀವನವನ್ನು ಓದಿ, ಭಗವಂತನೊಬ್ಬನೇ ಸತ್ಯ, ಉಳಿದುದೆಲ್ಲ ಭ್ರಮೆಯೆಂದು ಬಗೆಯಲಾರದವರು ವಿರಳ."[2]

ಭಾರತವನ್ನು ಪುನರುತ್ಥಾನಗೊಳಿಸಿದ ಮೇಲಿನಿಬ್ಬರು ಮಹಾನ್ ವ್ಯಕ್ತಿಗಳ ನುಡಿಗಳು ಶ್ರೀರಾಮಕೃಷ್ಣರ ಜೀವನ ಹಾಗೂ ಸಂದೇಶಗಳ ಮೂಲ ಉದ್ದೇಶದೆಡೆಗೆ ನಮ್ಮ ಗಮನ ಸೆಳೆಯುತ್ತವೆ. ಶ್ರೀರಾಮಕೃಷ್ಣರು ಮೂಲತಃ ಅನುಭಾವಿಗಳು, ಅವತಾರಪುರುಷರು. ಮಾನವನಲ್ಲಿ ಸುಪ್ತವಾಗಿರುವ ಆಧ್ಯಾತ್ಮಿಕ ಚೇತನವನ್ನು ಜಾಗೃತಗೊಳಿಸಿ ದೈವತ್ವದೆಡೆಗೆ ಕರೆದೊಯ್ಯುವುದೇ ಅವರ ಜೀವನದ ಮೂಲ ಉದ್ದೇಶವಾಗಿತ್ತು ಎನ್ನುವುದನ್ನು ಮೇಲಿನ ಹೇಳಿಕೆಗಳು ತೋರಿಸಿಕೊಡುತ್ತವೆ.

## ಪರಿಶುಭ್ರ ಆಧ್ಯಾತ್ಮಿಕ ತರಂಗ

ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದಲ್ಲಿ ಭಾರತ ಪರಿಪೂರ್ಣ ಆಧ್ಯಾತ್ಮಿಕ ಪುನರ್ಜನ್ಮಕ್ಕಾಗಿ ತವಕಿಸುತ್ತಿತ್ತು. ಇದು ಆ ಕಾಲಕ್ಕೆ ಬಹಳ ಅವಶ್ಯವೂ ಆಗಿತ್ತು. ಏಕೆಂದರೆ ಆ ಕಾಲಘಟ್ಟದಲ್ಲಿ ತನ್ನ ಸಹಜ ಆಧ್ಯಾತ್ಮಿಕ ಧ್ಯೇಯದಿಂದ ರಾಷ್ಟ್ರ ದೂರ ಸರಿಯುತ್ತಿತ್ತು. ಪಾಶ್ಚಾತ್ಯ ಜೀವನದ ಪ್ರಾಪಂಚಿಕ ಥಳುಕು ಸೊಬಗುಗಳ ಸೆಳೆತವನ್ನು ಅದಕ್ಕೆ ತಡೆಯಲಿಕ್ಕಾಗಿರಲಿಲ್ಲ. ಹೀಗಾಗಿ, ಭಾರತದ ಆಧ್ಯಾತ್ಮಿಕಪ್ರಜ್ಞೆಗೆ ಗರ ಬಡಿದಂತಾಗಿ ಅದು ಜಡ್ಡುಗಟ್ಟಿತ್ತು. ಅಜ್ಞೇಯತಾವಾದದ ಸಂದೇಹಗ್ರಸ್ತ ಮನೋಭಾವ ಅಕ್ಟೋಪಸ್‌ನಂತೆ ತನ್ನ ಭಯಾನಕ ಪ್ರಭಾವವನ್ನು ರಾಷ್ಟ್ರೀಯ ಚೇತನದ ಮೇಲೆ ಬೀರಲಾರಂಭಿಸಿತ್ತು. ಈ ಪರಿಸ್ಥಿತಿಯಲ್ಲಿ ನಮ್ಮ ರಾಷ್ಟ್ರ ಕಾತರತೆಯಿಂದ ಕಾಯುತ್ತಿದ್ದುದು ಒಬ್ಬ ವಿಮೋಚಕನಿಗಾಗಿ;



ಈ ದೇಶದ ಅತ್ಯುನ್ನತ ಹಾಗೂ ಪರಮೋತ್ಕೃಷ್ಟ ಆಧ್ಯಾತ್ಮಿಕ ಪರಂಪರೆಯನ್ನು ತನ್ನ ವ್ಯಕ್ತಿತ್ವದಲ್ಲಿ ಮೈತಳೆದು ನಿಂದು, ಭಗವತ್ಕೇಂದ್ರಿತ ಆಧ್ಯಾತ್ಮಿಕ ಪ್ರಜ್ಞೆಯ ಶಿಖರದೆತ್ತರಕ್ಕೆ ಇಡೀ ರಾಷ್ಟ್ರಚೇತನವನ್ನು ಕೊಂಡೊಯ್ಯಬಲ್ಲ ಒಬ್ಬ ಮಹಾವ್ಯಕ್ತಿಗಾಗಿ.

ಶ್ರೀರಾಮಕೃಷ್ಣರು ತಮ್ಮ ಜೀವಿತಾವಧಿಯಲ್ಲಿ ಭಾರತಕ್ಕೆ ಮಾಡಿದ ಮಹೋಪಕಾರವದಾವುದು? ಅವರು ಭಾರತೀಯ ಜೀವನಗಂಗಾ ಧಾರೆಯನ್ನು ರಚನಾತ್ಮಕ ಮಾರ್ಗಗಳತ್ತ ತಿರುಗಿಸಿ ಅದರ ರಾಷ್ಟ್ರೀಯ ಚೇತನವನ್ನು ತನ್ನ ಸಹಜ ನಿರ್ಮಲ ಕ್ಷೇತ್ರದಲ್ಲಿ ಪುನಃ ಸಂಸ್ಥಾಪಿಸಿದರು; ಕಠಿಣ ಆಧ್ಯಾತ್ಮಿಕ ಸಾಧನೆಗಳ ಮೂಲಕ ಅಪೂರ್ವ ಹಾಗೂ ಅದ್ಭುತ ಅನುಭೂತಿಗಳನ್ನು ತಮ್ಮ ಜೀವನದಲ್ಲಿ ಸಿದ್ಧಿಸಿಕೊಂಡು, ನಮ್ಮ ಪರಂಪರೆಯ ಪುರಾತನ ಜೀವನಮೌಲ್ಯಗಳನ್ನು ಪುನರಾವಿಷ್ಕರಿಸಿ ಅವನ್ನು ಮತ್ತೆ ಭಾರತೀಯ ಜೀವಿತದ ಜೀವಾಳವನ್ನಾಗಿಸಿದರು; ಶತಮಾನಗಳಿಂದ ಶೇಖರವಾಗಿದ್ದ ಈ ನಾಡಿನ ಆಧ್ಯಾತ್ಮಿಕ ಶಕ್ತಿಪುಂಜಗಳನ್ನು ತಮ್ಮ ವಿಶಾಲ ವ್ಯಾಪಕ ಅನುಭಾವದ ಮೂಲಕ ಕ್ರೋಡೀಕರಿಸಿದರು; ನಿರಂತರ ದೈವೋನ್ಮಾದದಲ್ಲಿ ಮುಳುಗಿಹೋಗಿದ್ದ ತಮ್ಮ ಅಸಾಧಾರಣ ಜೀವನದ ಮೂಲಕ ಮಲಿನ ಕಲ್ಮಷಗಳೆಲ್ಲ ಕೊಚ್ಚಿಕೊಂಡು ಹೋದ ಪರಿಶುಭ್ರ ಮಹಾನ್ ಆಧ್ಯಾತ್ಮಿಕ ತರಂಗ ಶಿಖರವೇ ತಾವಾದರು; ಆ ಮೂಲಕ ಭಾರತದ ಫಲವತ್ತಾದ ಭೂಮಿಗೆ ಆಧ್ಯಾತ್ಮಿಕತೆಯ ತಿಳಿನೀರನ್ನೆರೆದು, ಅಲ್ಲಿ ಧರ್ಮಜೀವಿಗಳೂ, ದೈವೋನ್ಮತ್ತರೂ, ಸುಸಂಸ್ಕೃತರೂ ಆದಂತಹ ಸಹಸ್ರಾರು ಭಾರತೀಯ ನರನಾರಿಯರ ರೂಪದ ಫಸಲನ್ನು ಬೆಳೆಸಿದ ಕೃಷಿಕಪೋಷಕರಾದರು.

## ಪರಮಾದ್ಭುತ

ಜಗತ್ತಿನ ಎಲ್ಲೆಡೆ ಶ್ರೀರಾಮಕೃಷ್ಣರ ಸಂದೇಶವನ್ನು ಪ್ರಸಾರ ಮಾಡಿದ ಸ್ವಾಮಿ ವಿವೇಕಾನಂದರು ಅವರ ಅವತರಣವನ್ನು ಕುರಿತು ಹೀಗೆ ಹೇಳಿದ್ದಾರೆ:

"ಅದ್ಭುತ ಪ್ರತಿಭೆ ಮತ್ತು ವಿಶಾಲ ಹೃದಯ– ಇವೆರಡರಿಂದ ಕೂಡಿದ ಒಬ್ಬ ಅದ್ಭುತ ಪುರುಷನೊಬ್ಬನ ಜನ್ಮಕ್ಕೆ ಸಮಯ ಸನ್ನಿಹಿತವಾಯಿತು. ಶಂಕರಾಚಾರ್ಯರ ಅದ್ಭುತ ಪ್ರತಿಭೆಯ ಜೊತೆಗೆ ಶ್ರೀಚೈತನ್ಯರ

ಅದ್ಭುತ ವಿಶಾಲ ಅನಂತ ಹೃದಯ ಒಂದುಗೂಡಬೇಕಾಗಿತ್ತು. ಯಾರು ಪ್ರತಿಯೊಂದು ಸಂಪ್ರದಾಯದಲ್ಲಿಯೂ ಒಬ್ಬನೇ ಈಶ್ವರನು ಕಾರ್ಯವೆಸಗುತ್ತಿರುವುದನ್ನು ಕಾಣಬಲ್ಲರೋ, ಯಾರ ಹೃದಯ ದೀನರಿಗೆ, ದುರ್ಬಲರಿಗೆ, ಜಾತಿಬಾಹಿರರಿಗೆ, ಪದದಲಿತರಿಗೆ – ಅವರು ಭರತ ಖಂಡದಲ್ಲಿರಲಿ, ಪ್ರಪಂಚದಲ್ಲಿ ಬೇರೆಲ್ಲಿಯಾದರೂ ಇರಲಿ– ಮರುಗುತ್ತಿತ್ತೋ, ಜೊತೆಗೆ ಯಾರ ಅದ್ಭುತ ಪ್ರಚಂಡ ಬುದ್ಧಿಶಕ್ತಿಯು ಭರತ ಖಂಡದ ಮತ್ತು ಹೊರಗಿನ ವಿಭಿನ್ನ ಸಂಪ್ರದಾಯಗಳಲ್ಲಿ ಸಮನ್ವಯತೆಯನ್ನು ಸ್ಥಾಪಿಸುವ ಉದಾತ್ತ ವಿಚಾರವನ್ನು ಚಿಂತಿಸಿತೋ, ಯಾರು ಹೃದಯ ಮತ್ತು ಬುದ್ಧಿಗಳ ಸಾಮರಸ್ಯವನ್ನು ಸಾಧಿಸುವ ವಿಶ್ವಧರ್ಮವನ್ನು ಸ್ಥಾಪಿಸಬಲ್ಲವರಾಗಿದ್ದರೋ ಅಂತಹ ವ್ಯಕ್ತಿ ಜನ್ಮವೆತ್ತಿದನು; ಅಂತಹ ವ್ಯಕ್ತಿಯ ಜನನಕ್ಕೆ ಸಮಯ ಸನ್ನಿಹಿತವಾಗಿತ್ತು; ಅಂತಹ ವ್ಯಕ್ತಿಯ ಜನನ ಆವಶ್ಯಕವಾಗಿತ್ತು; ಅವರೀಗ ಜನಿಸಿದರು.[೩]

ಸ್ವಾಮಿ ವಿವೇಕಾನಂದರ ಈ ಮಾತುಗಳ ಮೂಲಕ ಶ್ರೀರಾಮಕೃಷ್ಣರ ಜೀವನ ಮತ್ತು ಸಂದೇಶಗಳ ಸ್ಪಷ್ಟ ಅರಿವು ನಮಗುಂಟಾಗುತ್ತದೆ. ಅವರ ಜೀವನದ ಮೂಲಕ ಭಾರತದ ರಾಷ್ಟ್ರಚೇತನದಲ್ಲಿ ಒಂದು ನೂತನ ಜಾಗೃತಿಯಾಗಿರುವುದೇನೋ ಸರಿಯೆ, ಅದರ ಜೊತೆಗೆ ವಿಭಿನ್ನ ಧಾರ್ಮಿಕ ಪಂಗಡಗಳ ನಡುವೆ ಭ್ರಾತೃತ್ವ, ಸೌಹಾರ್ದತೆ, ತಿಳಿವಳಿಕೆ ಹಾಗೂ ಮಾನವ ಜನಾಂಗದ ಬೇರೆ ಬೇರೆ ಭಾಗಗಳ ನಡುವೆ ಆಧ್ಯಾತ್ಮಿಕ ಐಕ್ಯತೆಯ ಭಾವ ಕೂಡ ಬೆಳೆಯುತ್ತಿರುವುದು ಹಗಲಿನಷ್ಟೇ ಸತ್ಯ ಮತ್ತು ಸುಸ್ಪಷ್ಟ.

'ರಾಮಕೃಷ್ಣ ಮತ್ತು ಅವರ ಶಿಷ್ಯರು' ಎಂಬ ತಮ್ಮ ಪುಸ್ತಕದಲ್ಲಿ ಕ್ರಿಷ್ಟೋಫರ್ ಇಶರ್‌ವುಡ್ ಶ್ರೀರಾಮಕೃಷ್ಣರನ್ನು 'ಪರಮಾದ್ಭುತ' (Phenomenon) ಎಂದು ಹೆಸರಿಸುತ್ತಾರೆ. ಅವರ ಪ್ರಕಾರ ಅತ್ಯದ್ಭುತವಾದದ್ದು ಸಾಮಾನ್ಯವಾಗಿ ವಿಶೇಷ ರಹಸ್ಯಗುಣಗಳನ್ನು ಹೊಂದಿರುತ್ತದೆ. ಶ್ರೀರಾಮಕೃಷ್ಣರೂ, ಅದೂ ಕೂಡ ವಿಶೇಷವಾಗಿ ಅವರನ್ನು ಅರಿಯಬಲ್ಲವರಿಗೆ, ಅಂತಹ ವೈಶಿಷ್ಟ್ಯಮಯ ವ್ಯಕ್ತಿಯೂ, ರಹಸ್ಯಮೂರ್ತಿಯೂ ಆಗಿದ್ದರು.

**ಅತ್ಯದ್ಭುತವಾದದ್ದು ಯಾವಾಗಲೂ ಸತ್ಯವಾದದ್ದು ಮತ್ತು ಅನುಭವಕ್ಕೆ ಬರುವಂತಹದ್ದು. ಶ್ರೀರಾಮಕೃಷ್ಣರು ತಮ್ಮ ದೈನಂದಿನ ಚಟುವಟಿಕೆಗಳಲ್ಲಿ ಮಾತ್ರವಲ್ಲ, ಆಧ್ಯಾತ್ಮಿಕ ಸಾಧಕರಾಗಿ ನಾನಾ ರೀತಿಯ ಸಾಧನೆಗಳನ್ನು ಮಾಡುವಾಗ ಹಾಗೂ ನಂತರ ತಮ್ಮ ಮಾರ್ಗದರ್ಶನಕ್ಕಾಗಿ ಬಂದ ಭಕ್ತರಿಗೆ ಉಪದೇಶ ನೀಡುವಾಗ ಕೂಡ, ಅದ್ವಿತೀಯ ಅತ್ಯದ್ಭುತ ಆಧ್ಯಾತ್ಮಿಕ ಶಕ್ತಿ ಸಂಚಾಲಕರಾಗಿದ್ದರು. ಸ್ವಾಮಿ ವಿವೇಕಾನಂದರು ಹೇಳುವಂತೆ ಈ ವಿಶೇಷ ಗುಣ ಅವರ ಉಪದೇಶಗಳಲ್ಲಿಯೂ ಪ್ರಕಾಶಿಸುತ್ತಿದೆ. ಇತರ ಆಚಾರ್ಯರು ತಮ್ಮ ಅಂಕಿತವುಳ್ಳ ಧರ್ಮವಿಶೇಷಗಳನ್ನು ಬೋಧಿಸಿದರು. ಆದರೆ ಹತ್ತೊಂಬತ್ತನೆಯ ಶತಮಾನದ ಈ ಮಹಾನ್ ಆಚಾರ್ಯ ತಮ್ಮ ಸ್ವಂತದ್ದೆಂದು ಯಾವುದನ್ನೂ ಹೇಳಿಕೊಳ್ಳಲಿಲ್ಲ; ಯಾವ ಧರ್ಮದ ಅನುಸರಣೆಗೂ ಅಡ್ಡಿಪಡಿಸಲಿಲ್ಲ. ಕಾರಣ ತಮ್ಮ ಆಧ್ಯಾತ್ಮಿಕ ಅನುಭಾವದ ಮೂಲಕ ಎಲ್ಲ ಧರ್ಮಗಳೂ ಒಂದೇ ಶಾಶ್ವತ ಧರ್ಮದ ಅಂಗಗಳಷ್ಟೆ ಎಂಬ ಪರಮ ಸತ್ಯವನ್ನು ಶ್ರೀರಾಮಕೃಷ್ಣರು ಅರಿತಿದ್ದರು.**

## ಭಗವದಿಚ್ಛೆಯ ಜೀವನ

ಶ್ರೀರಾಮಕೃಷ್ಣರಿಗೆ ಭಗವಂತನೇ ನಿರ್ದಿಷ್ಟಗೊಳಿಸಿದ ನಿಯಮಿತ ಜೀವಿತಕಾರ್ಯವಿತ್ತು ಎಂಬುದು ಅವರ ಬಾಲ್ಯಜೀವನದಲ್ಲೇ ವ್ಯಕ್ತವಾಗುವುದು. ಅವರ ಬಾಲ್ಯಜೀವನದ ಅನೇಕ ಘಟನೆಗಳಲ್ಲಿ, ಹಳ್ಳಿಯ ಮನೆಯಲ್ಲಿ ಕಳೆದ ಅವರ ತಾರುಣ್ಯದಲ್ಲಿ ಹಾಗೂ ನಂತರದ ದಕ್ಷಿಣೇಶ್ವರದ ದಿವ್ಯೋನ್ನತ್ತ ಜೀವನದಲ್ಲಿ ಆ ಭಗವದಿಚ್ಛೆಯು ಪ್ರಕಟಗೊಂಡ ಅಸಾಧಾರಣ ಬಗೆಯನ್ನು ನಾವು ಗಮನಿಸಬಹುದು.

ದಕ್ಷಿಣೇಶ್ವರದಲ್ಲಿ ತಾಯಿಕಾಳಿಯ ಪೂಜಾರಿಯಾಗಿ ಅದೆಂತಹ ಅದ್ಭುತ ಜೀವನವನ್ನು ಅವರು ನಡೆಸಿದರು! ಜಗಜ್ಜನನಿ ಅವರಿಗೆ ಕಾರ್ಗಲ್ಲ ಕಲ್ಲಾಗಿರದೆ ಉಸಿರಾಡುವ ಜೀವಂತ ಸತ್ಯವಾಗಿದ್ದಳು; ಅವಳೊಡನೆ ತಾಯಿಗೆ ಮಗುವಿಗಿರುವಂತಹ ಆತ್ಮೀಯ ಮಮತೆಯನ್ನು ಅವರು ಬೆಳೆಸಿಕೊಂಡಿದ್ದರು. ತಮ್ಮೆಲ್ಲ ಸಮಸ್ಯೆಗಳಿಗೂ ಸಂದೇಹಗಳಿಗೂ ಅವರು ಜಗನ್ಮಾತೆಯೊಡನೆ ಮಾತುಕತೆಯಾಡಿ ಪರಿಹಾರಗಳನ್ನು ಪಡೆಯುತ್ತಿದ್ದರು.

ಜಗನ್ಮಾತೆಯ ದರ್ಶನದ ತರುವಾಯ, ಶ್ರೀರಾಮಕೃಷ್ಣರು ತಾವು ಉಪಕ್ರಮಿಸಿದ ಪ್ರತಿಯೊಂದು ಸಾಧನಾವಿಶೇಷದಲ್ಲಿಯೂ ಅದ್ಭುತ ಯಶಸ್ಸನ್ನು ಪಡೆದರು. ನಾನಾ ಬಗೆಯ ಸಾಧನೆಗಳನ್ನು ಅನುಸರಿಸಿ ಅವುಗಳೆಲ್ಲದರ ಪರಾಕಾಷ್ಠತೆಯನ್ನು ಅತಿಶೀಘ್ರವಾಗಿ ತಲುಪಿದರು. ಈ ರೀತಿಯಾಗಿ ಅವರು ಶಾಕ್ತ, ವೈಷ್ಣವ ಹಾಗೂ ಇತರ ಸಂಪ್ರದಾಯಗಳ ಸಾಧನೆಗಳನ್ನು, ಅಯಾಚಿತವಾಗಿ ಅವರ ಬಳಿಸಾರಿದ ಗುರುಗಳಿಂದ ಕಲಿತು, ಅಭ್ಯಾಸ ಮಾಡಿದರು. ವಿವಾಹವಾಗಿದ್ದರೂ ತೋತಾಪುರಿಯಲ್ಲಿ ಶಿಷ್ಯತ್ವವನ್ನು ಸ್ವೀಕರಿಸಿ ಸಂನ್ಯಾಸದೀಕ್ಷೆಯನ್ನು ಪಡೆದರು. ಪ್ರೇಮಮೂರ್ತಿ ಏಸುಪ್ರಭುವಿನ ಕ್ರೈಸ್ತಧರ್ಮ ಹಾಗೂ ಸಮಾನತೆಯ ಹರಿಕಾರ ಪ್ರವಾದಿ ಮುಹಮ್ಮದರ ಧರ್ಮಗಳನ್ನು ನಿಷ್ಠೆಯಿಂದ ಅನುಸರಿಸಿ, ವಿಶಿಷ್ಟ ರೀತಿಯಲ್ಲಿ ಆ ಪುಣ್ಯಪುರುಷರ ದರ್ಶನವನ್ನೂ ಪಡೆದರು. ಎಲ್ಲ ಸಾಧನೆಗಳ ನಂತರ, ಕಟ್ಟಕಡೆಯಲ್ಲಿ ಅವರು ಘೋಷಿಸಿದರು, **'ಯತೋ ಮತ್, ತತೋ ಪಥ್'** – ಎಷ್ಟು ಮತಗಳೊ ಅಷ್ಟೇ (ಭಗವಂತನನ್ನು ಸೇರುವ) ಪಥಗಳು.'

## ಶ್ರೀರಾಮಕೃಷ್ಣರ ಜೀವನ–ಸಂದೇಶಗಳ ಪ್ರಸ್ತುತತೆ

ಎಲ್ಲ ಧರ್ಮಗಳ ಮೂಲಭೂತ ಐಕ್ಯತೆಯ ಈ ಅನುಭವ ಹಾಗೂ ಸಂದೇಶ ಇಂದಿನ ಪ್ರಪಂಚಕ್ಕೆ ಅತ್ಯಂತ ಪ್ರಸ್ತುತವಾಗಿದೆ. ಇಂದು ಜಗವೆಲ್ಲವೂ ಮತೀಯ ಭಿನ್ನಾಭಿಪ್ರಾಯ ಹಾಗೂ ಘರ್ಷಣೆಗಳಿಂದ ಜರ್ಝರಿತವಾಗಿದೆ; ಮತಾಂಧತೆಯ ಕ್ಷೋಭೆಯಿಂದ ವಿಭಜಿತವಾಗಿದೆ. ಶ್ರೀರಾಮಕೃಷ್ಣರ ಸಂದೇಶದ ಮಹತ್ವ ಬಹು ವ್ಯಾಪಕ, ಏಕೆಂದರೆ ಅದು ಆಧ್ಯಾತ್ಮಿಕ ಸ್ತರಗಳಿಗೆ ಮಾತ್ರವಲ್ಲ ಮಿಕ್ಕೆಲ್ಲ ಸ್ತರಗಳಿಗೂ ಅನ್ವಯವಾಗುತ್ತದೆ. ವೇದಾಂತವು ಹೇಳುವಂತೆ ಮಾನವಕುಲಕ್ಕಿರುವ ಆಧ್ಯಾತ್ಮಿಕ ತಳಹದಿ ಒಂದೇ. ಎಲ್ಲ ಧರ್ಮಗಳೂ ಮೂಲತಃ ಒಂದೇ. ಆದ್ದರಿಂದ ಆಯಾ ಧರ್ಮಗಳ ಉಗಮಸ್ಥಾನವಾದ ಇಡೀ ಮಾನವಕುಲ ಕೂಡ ಒಂದೇ ಎಂದು ಹೇಳುವುದು ಸಹಜ ಮತ್ತು ನೈಸರ್ಗಿಕ. ಈ ದೃಷ್ಟಿಯಿಂದ ನೋಡಿದಾಗ ವಿವಿಧ ಧರ್ಮಗಳ ನಡುವಿನ ಕಲಹಗಳು ಮೂಢತನ ಹಾಗೂ ತಿಳಿಗೇಡಿತನದ ಕೃತ್ಯಗಳಷ್ಟೇ ಎಂದು ಎಂತಹವರಿಗೂ ವೇದ್ಯವಾಗುತ್ತದೆ. ಇದು ಶ್ರೀರಾಮಕೃಷ್ಣರ ಜೀವನ ಮತ್ತು ಸಂದೇಶಗಳಿಂದ ನಾವು ಕಲಿಯಬೇಕಾದ ದೊಡ್ಡ ಪಾಠ.

ವೈವಿಧ್ಯತೆ ಪ್ರಕೃತಿನಿಯಮ. ಪ್ರಕೃತಿಮಾತೆ ವೈವಿಧ್ಯತೆಯ ಮೂಲಕ ಆನಂದವನ್ನು ಪಡೆಯಲಿಚ್ಛಿಸುತ್ತಾಳೆ. ಆದ್ದರಿಂದಲೇ ಬೇಸರದ ಏಕತಾನತೆಯನ್ನು ಅವಳು ದೂರಮಾಡಿದ್ದಾಳೆ. ಈ ವಿವಿಧತೆಯೂ ಕೂಡ ವಿಶ್ವವ್ಯಾಪಿಯಾದ ಅದ್ವಿತೀಯವಾದ ತತ್ತ್ವದಿಂದಲೇ

ಹೊರಹೊಮ್ಮಿದೆ. ಸದಾ ಬದಲಾಗುತ್ತಿರುವ ದೃಶ್ಯಗಳು, ಭಾವಗಳು, ಬಣ್ಣಗಳು, ಸನ್ನಿವೇಶಗಳು, ವ್ಯಕ್ತಿಗಳು ಸ್ಥಿರವಾಗಿರುವ ಬಿಳಿಯ ತೆರೆಯ ಮೇಲೆ ಹಾದುಹೋಗುವಂತೆ ವೈವಿಧ್ಯತೆಯ ಮೂಲಕ ಸದಾ ಪರಿವರ್ತನಾಶೀಲವಾಗಿರುವುದು ಪ್ರಕೃತಿಯ ಗುಣ. ಆದರೆ ಅದರ ಆಧಾರವಾಗಿ, ಹಿನ್ನೆಲೆಯಲ್ಲಿರುವ ಅಖಂಡ ವಸ್ತುವಿನಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ. ವಿವಿಧ ಧರ್ಮಗಳ ಸಮನ್ವಯವನ್ನು ಸಾರುವ ಶ್ರೀರಾಮಕೃಷ್ಣರ ಸಂದೇಶದ ತಾತ್ತ್ವಿಕ ಅಭಿಪ್ರಾಯವಿದು. ಈ ವಿಶ್ವವ್ಯಾಪೀ ಬೋಧನೆಯು ಈಗಾಗಲೇ ಜಗತ್ತಿನಲ್ಲೆಲ್ಲ ಲಕ್ಷ ಲಕ್ಷ ಮಾನವರ ಹೃದಯವನ್ನು ಗೆಲ್ಲುತ್ತಲಿದ್ದು, ತನ್ಮೂಲಕ ವಿವಿಧ ಮತದವರಲ್ಲಿ ಪರಸ್ಪರ ಸೌಹಾರ್ದತೆ ಹಾಗೂ ಪ್ರಶಂಸೆಗಳು ಬೆಳೆಯುತ್ತಿವೆ. ಇದು ಧಾರ್ಮಿಕ ಹಾಗೂ ಆಧ್ಯಾತ್ಮಿಕ ವಿಚಾರಗಳಿಗೆ ಮಾತ್ರ ಸೀಮಿತವಾಗಿರದೆ, ಸಾಮಾಜಿಕ ಮತ್ತು ಸಾಂಸ್ಕೃತಿಕ ಭಾವನೆಗಳು ಹಾಗೂ ಆದರ್ಶಗಳಿಗೂ ಪಸರಿಸಿವೆ. ಹೀಗೆ, ಶ್ರೀರಾಮಕೃಷ್ಣರ ಸಂದೇಶವು ಮಾನವ ಸಮಾಜದಲ್ಲಿ ಪರಸ್ಪರ ಗೌರವ, ವಿಶ್ವಾಸ, ಭ್ರಾತೃತ್ವ ಹಾಗೂ ಸಹಕಾರಗಳಂತಹ ಉನ್ನತ ಆದರ್ಶಗಳನ್ನು ಹರಡುವುದರೊಂದಿಗೆ ಸರ್ವಾಂಗೀಣ ಜಾಗತಿಕ ಕಲ್ಯಾಣಕ್ಕೆ ನಾಂದಿಯನ್ನು ಹಾಕಿದೆ.

"ಭಗವಂತನನ್ನು ಕಾಣಬಯಸುವೆಯಾದರೆ ಸಾಕ್ಷಾತ್ ಅವನ ವ್ಯಕ್ತರೂಪವೇ ಆದ ಮಾನವನ ಸೇವೆಯನ್ನು ಮಾಡು" ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಅವರ ಈ ಮಹತ್ವಪೂರ್ಣ ಆಧ್ಯಾತ್ಮಿಕ ಉಪದೇಶಕ್ಕೆ ಸಾಮಾಜಿಕವಾಗಿಯೂ ಶಕ್ತಿಪೂರಿತ ಆಯಾಮವಿದೆ. ಶ್ರೀರಾಮಕೃಷ್ಣರು ತಮ್ಮ ಅದ್ವೈತಾನುಭವದ ಮೂಲಕ ಸಮಸ್ತ ಜೀವಿಗಳಲ್ಲಿ ಸುಪ್ತವಾಗಿರುವ ಮತ್ತು ಎಲ್ಲದರ ಹಿನ್ನೆಲೆಯಲ್ಲಿರುವ ಏಕಸೂತ್ರವಾದ ದಿವ್ಯತೆಯನ್ನು ಅರಿತಿದ್ದರು. ಆದ್ದರಿಂದ ಸೃಷ್ಟಿಯಲ್ಲಿರುವ ಯಾವುದೇ ವಸ್ತುವು ಪೂಜಿಸಲು ಯೋಗ್ಯವಲ್ಲ, ಗೌರವಕ್ಕೆ ಅರ್ಹವಲ್ಲ ಎಂದು ಅವರಿಗನಿಸಲೇ ಇಲ್ಲ. ಅವರ ಪಾಲಿಗೆ ಪ್ರತಿ ಜೀವಿಯೂ ಶಿವಸ್ವರೂಪಿಯಾಗಿಯೇ ಕಂಡು ಬರುತ್ತಿದ್ದನು.

## ಮೂರು ಪ್ರಮುಖ ವಿಚಾರರತ್ನಗಳು

ಶ್ರೀರಾಮಕೃಷ್ಣರ ಜೀವನ ಮತ್ತು ಸಂದೇಶಗಳ ಗಣಿಯಿಂದ ಮೂರು ಪ್ರಮುಖ ವಿಚಾರರತ್ನಗಳು ಹೊರಹೊಮ್ಮುತ್ತವೆ. ಮೊದಲನೆಯದಾಗಿ, ಮಹಾತ್ಮ ಗಾಂಧಿಯವರು ಹೇಳುವಂತೆ ಶ್ರೀರಾಮಕೃಷ್ಣರ ಜೀವನ ಇಂದಿನ ಪ್ರಾಪಂಚಿಕತೆಯ ಜೀವನಕ್ಕೆ ತದ್ವಿರುದ್ಧವಾದ ಭಗವನ್ಮುಖ ಜೀವನವಾಗಿತ್ತು ಎಂಬುದು. ಶ್ರೀರಾಮಕೃಷ್ಣರಿಗೆ ಭಗವಂತನೊಬ್ಬನೇ ಸತ್ಯವಸ್ತು. ಅವರ ಹಿನ್ನೆಲೆಯಲ್ಲಿ ಮಾತ್ರ ಬೇರೆ ಎಲ್ಲ ವಸ್ತುಗಳಿಗೂ ಮೌಲ್ಯ ಹಾಗೂ ಅರ್ಥವಿರುತ್ತದೆ ಎಂಬುದು ಅವರ ದೃಢ ನಂಬಿಕೆ. ಅದನ್ನು ತಮ್ಮದೇ ಆದ ಶೈಲಿಯಲ್ಲಿ ಅವರು ಹೀಗೆ ವಿವರಿಸುತ್ತಿದ್ದರು: ಎಷ್ಟೇ ಸೊನ್ನೆಗಳನ್ನು ಜೋಡಿಸಿ ಬರೆದರೂ ಅವುಗಳಿಗೆ ಬೆಲೆಯಿರುವುದಿಲ್ಲ. ಮೊದಲಿಗೆ ಒಂದು ಅಂಕಿ ಇದ್ದಾಗ ಮಾತ್ರ ಅವುಗಳಿಗೆ ಬೆಲೆಯುಂಟಾಗುವುದು. ಅಂತೆಯೇ ಈ ಜಗತ್ತಿನ ಎಲ್ಲ ಪದಾರ್ಥಗಳೂ ಶೂನ್ಯವೇ ಆಗಿವೆ. ಅವುಗಳಿಗೆ ಅರ್ಥ ಕಲ್ಪಿಸುವವನು ಭಗವಂತ. ಸಂಖ್ಯೆ ಇರದಿದ್ದರೆ, ಸೊನ್ನೆಗಳಿಗೆ ಯಾವುದೇ ಅರ್ಥವಿರುವುದಿಲ್ಲ. ಹಾಗೆಯೇ ಭಗವದ್ವಸ್ತುವಿನ ಆಧಾರವಿಲ್ಲದೆ, ಜಗತ್ತಿನ ಸಂಗತಿಗಳಿಗೆ ಅಸ್ತಿತ್ವ ಇರುವುದಿಲ್ಲ. ಹೀಗಾಗಿ, ಇಡೀ ಪ್ರಪಂಚದಲ್ಲಿ ಓತಪ್ರೋತನಾಗಿರುವ ಭಗವಂತನ ಸ್ಮರಣೆ ಮಾಡುತ್ತ ಅವನಲ್ಲಿ ಶ್ರದ್ಧೆ, ಭಕ್ತಿ ಹಾಗೂ ಸೇವಾಭಾವದಿಂದ ನಮ್ಮೆಲ್ಲ ಕಾರ್ಯಗಳನ್ನು ಮಾಡಬೇಕೆಂಬುದು ಶ್ರೀರಾಮಕೃಷ್ಣರ ಅಭಿಪ್ರಾಯ.

ಎರಡನೆಯದಾಗಿ, ಎಲ್ಲ ಧರ್ಮಗಳ ಸಮನ್ವಯ ಮತ್ತು ಐಕ್ಯತೆಯ ಶ್ರೀರಾಮಕೃಷ್ಣರ ಸಂದೇಶವು ಇಂದಿನ ಜಗತ್ತಿಗೆ ಅತ್ಯಂತ ಅಗತ್ಯವಾದುದು. ಇದು ಜಗತ್ತಿನಲ್ಲಿ ಹೆಚ್ಚುತ್ತಿರುವ ಧಾರ್ಮಿಕ ಅಸಹನೆ, ಮತಾಂಧತೆ, ಮತಭ್ರಾಂತಿ, ಸಾಂಪ್ರದಾಯಿಕತೆ– ಇವುಗಳಿಗೆ ಅತ್ಯಂತ ಸಮಂಜಸ ಸಮಾಧಾನವನ್ನು ನೀಡಬಲ್ಲುದು. ಶ್ರೀರಾಮಕೃಷ್ಣರ ಸಂದೇಶಗಳ ಸರಿಯಾದ ಪಾಲನೆಯು ಬೇರೆ ಬೇರೆ ಧರ್ಮಗಳನ್ನು ಆಚರಿಸುವ ವ್ಯಕ್ತಿಗಳ ನಡುವೆ ಹೊಸ ದೃಷ್ಟಿಯ ಧಾರ್ಮಿಕ ಭ್ರಾತೃತ್ವ ಹಾಗೂ ಸಹಕಾರ ಪ್ರಜ್ಞೆಯನ್ನು ಮೂಡಿಸಬಲ್ಲುದು. ಆಗ ' ಭಗವಂತನು ನಮ್ಮ ತಂದೆ ಹಾಗೂ ನಾವೆಲ್ಲ ಅವನ ಪುತ್ರರು ' ಎಂಬ, ಎಲ್ಲರೂ ಬಯಸುವ ಆದರ್ಶವು ಆಚರಣೆಗೆ ಬರುತ್ತದೆ.

ಮೂರನೆಯದಾಗಿ, 'ಭಗವಂತನೆಂಬ ಅರಿವಿನಿಂದ ಮಾನವನ ಸೇವೆ' ಎಂಬ ಶ್ರೀರಾಮಕೃಷ್ಣರ ಉಪದೇಶವು ಬಹಳ ಮಹತ್ವಪೂರ್ಣವಾದುದು. ಈ ಮನೋಭಾವದಿಂದ ಸೇವೆ ಮಾಡುವ ವ್ಯಕ್ತಿ, ಎಲ್ಲರಲ್ಲಿ ದಿವ್ಯತೆಯನ್ನು ಗುರುತಿಸುವ ಸ್ತರಕ್ಕೇರುತ್ತಾನೆ. ಅಂತಹ ಪರಿಸರದಲ್ಲಿ ಆಧ್ಯಾತ್ಮಿಕ–ಲೌಕಿಕಗಳ ನಡುವಣ ಭೇದ ಇಲ್ಲವಾಗುತ್ತದೆ. ಮಾನವನು ಮಾಡುವ ಪ್ರತಿಯೊಂದು ಕಾರ್ಯವೂ ಪೂಜೆಯಾಗಿ, ಸಾಧನೆಯಾಗಿ ಪರಿವರ್ತಿತವಾಗುತ್ತದೆ. ಆಗ ಈ ಮಾನವ ಜೀವನಕ್ಕೆ ಒಂದು ಅರ್ಥವಿರುತ್ತದೆ, ಉದ್ದೇಶವಿರುತ್ತದೆ. ಇಲ್ಲದಿದ್ದಲ್ಲಿ ಅದು ವ್ಯರ್ಥವಾಗಿ ಕಳೆದು ಹೋಗುತ್ತದೆ. ಆಧ್ಯಾತ್ಮಿಕತೆಯೇ ನಮ್ಮ ಆದರ್ಶವಾದರೆ ನಾವು ಮಾಡುವ ಪ್ರತಿಯೊಂದು ಕೆಲಸವೂ ಭಗವಂತನ ಪೂಜೆಯಾಗಬೇಕು ಎಂಬ ಆಶಯ ಶ್ರೀರಾಮಕೃಷ್ಣರ ಮೇಲಿನ ಬೋಧನೆಯಲ್ಲಿ ಅಡಗಿದೆ.

ವಿಷಯಾಸಕ್ತಿಯ ಸೆಳೆತ ಹಾಗೂ ಪ್ರಾಪಂಚಿಕ ಆದರ್ಶಗಳೆಂಬ ಅಂಧಕಾರದಿಂದ ಆವೃತವಾಗಿರುವ ನಮಗೆ ಆಧ್ಯಾತ್ಮಿಕ ಗುರಿಯತ್ತ ಕರೆದೊಯ್ಯಲು ಹಾಗೂ ನಮ್ಮ ಜೀವನ ಮಾರ್ಗದಲ್ಲಿ ಆಧ್ಯಾತ್ಮಿಕ ಬೆಳಕು ಬೀರಲು ಶ್ರೀರಾಮಕೃಷ್ಣರು ಶಕ್ತಿಶಾಲಿ ತೇಜಃಪುಂಜದಂತೆ ಈ ಆಧುನಿಕ ಯುಗದಲ್ಲಿ ಉದಯಿಸಿದ್ದಾರೆ. **ಮಾನವನನ್ನು ಭಗವಂತನೆಡೆಗೆ ಕರೆದೊಯ್ಯುವುದಷ್ಟೇ ಅಲ್ಲ, ಭಗವಂತನನ್ನೇ ಮಾನವನ ಸನಿಹಕ್ಕೆ ತರುವುದು ಕೂಡ ಅವರ ಜೀವನದ ಮುಖ್ಯ ಉದ್ದೇಶವಾಗಿತ್ತು.**

ಇಂದಿನ ಸಮಕಾಲೀನ ಜಗತ್ತಿಗೆ ಶ್ರೀರಾಮಕೃಷ್ಣರಿಂದ ಏನಾದರೂ ಸಂದೇಶವಿದ್ದರೆ, ಅದು ಇದು: ಮನುಷ್ಯ ವಿಷಯವಸ್ತುಗಳ ಅನ್ವೇಷಣೆಯಿಂದ ವಿಮುಖನಾಗಿ ಆಧ್ಯಾತ್ಮಿಕ ದೃಷ್ಟಿಯಿಂದ ಜಗತ್ತನ್ನು ನೋಡುತ್ತ ಎಲ್ಲವೂ ಭಗವನ್ಮಯವೆಂದು ಭಾವಿಸಬೇಕು; ಹಾಗೆ ಮಾಡುತ್ತ ಆನಂದ, ಶಾಂತಿಗಳ ಆಕರವಾದ ಭಗವದ್ದರ್ಶನವನ್ನು ಪಡೆಯಲು ವ್ಯಾಕುಲಚಿತ್ತನಾಗಬೇಕು. ಇದು ಕೇವಲ ಸಂದೇಶವಲ್ಲ, ಶ್ರೀರಾಮಕೃಷ್ಣರು ತಮ್ಮ ಬಾಳಿನಲ್ಲಿ ಸಾಧಿಸಿ ತೋರಿಸಿದ ಜೀವನಾದರ್ಶವೂ ಆಗಿದೆ ಎನ್ನುವುದನ್ನು ನಾವು ಮರೆಯಬಾರದು.

**ಆಕರಗಳು:**


೧. ವಿವೇಕಾನಂದರ ಕೃತಿಶ್ರೇಣಿ, ೪: ೨೧೦
೨. Preface to 'Sri Ramakrishna' ; Pub: Advaita Ashrama, Kolkata
೩. ವಿವೇಕಾನಂದರ ಕೃತಿಶ್ರೇಣಿ, ೩: ೧೪೨